**ದಿನಾಂಕಃ 24.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಆರ್ ಆರ್., 1,3,5 ಮತ್ತು 6 ನೇ ಪ್ರತಿವಾದಿ ಪರ ವಕೀಲರಿಂದ**

**2.** ನನ್ನ ತಾತನ ಹೆಸರು ಮುನಿಯಪ್ಪ. ನನ್ನ ತಾತ ಮುನಿಯಪ್ಪನಿಗೆ ಇಬ್ಬರೂ ಮಕ್ಕಳು ಅವರುಗಳೆಂದರೆ ನನ್ನ ತಂದೆ ಉತ್ತನೂರು ವೆಂಕಟಪ್ಪ ಹಾಗೂ ಮುನಿಯಮ್ಮ. ನನ್ನ ತಂದೆ ಉತ್ತನೂರು ವೆಂಕಟಪ್ಪನಿಗೆ 4 ಜನ ಮಕ್ಕಳು ಅವರುಗಳೆಂದರೆ 1) ಮುನಿಯಪ್ಪ, 2) ನಾರಾಯಣಪ್ಪ ಅಂದರೆ ನಾನು, 3) ಕೃಷ್ಣಪ್ಪ ಹಾಗೂ 4) ವೆಂಕಟರವಣಪ್ಪ. ನನ್ನ ತಂದೆಗೆ ಉತ್ತನೂರು ವೆಂಕಟಪ್ಪನಿಗೆ ಹೆಣ್ಣು ಮಕ್ಕಳು ಜನಿಸಿರುವುದಿಲ್ಲ.

**3.** ಮುನಿಯಮ್ಮ ನಾನು ಹುಟ್ಟುವ ಮೊದಲೇ ತೀರಿಕೊಂಡಿರುತ್ತಾರೆ. ಅವರನ್ನು ಕಾಡೆನಳ್ಳಿ ಗ್ರಾಮದ ವೆಂಕಟರವಣಪ್ಪ ರವರಿಗೆ ಮದುವೆ ಮಾಡಿಕೊಡಲಾಗಿತ್ತು. ಮುನಿಯಮ್ಮನಿಗೆ ಮದುವೆಯಾಗಿದ್ದು ಅವರಿಗೆ ಒಟ್ಟು 3 ಜನ ಮಕ್ಕಳು ಅವರುಗಳೆಂದರೆ 1) ಹನುಮಂತಪ್ಪ, 2) ನಾರಾಯಣಮ್ಮ ಹಾಗೂ 3)ಮುನಿಯಮ್ಮ. ಹನುಮಂತಪ್ಪ ಹಾಗೂ ನಾರಾಯಣಮ್ಮ ತೀರಿಕೊಂಡಿರುತ್ತಾರೆ. ಮುನಿಯಮ್ಮ ಮಾತ್ರ ಜೀವಂತ ಇರುತ್ತಾರೆ. ಹನುಮಂತಪ್ಪ ಹಾಗೂ ನಾರಾಯಣಮ್ಮನ ಮಕ್ಕಳು ಈಗಲೂ ಜೀವಂತ ಇರುತ್ತಾರೇ ಎಂದರೆ ಸರಿ. ಮುನಿಯಮ್ಮನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯೂ ಅವರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜೀವಂತ ಇರುತ್ತಾರೇ ಎಂದರೆ ಸರಿ.

**4.** ನಾನು ಹಾಗೂ ನನ್ನ ಸಹೋದರರು ಈಗಲೂ ಒಟ್ಟು ಕುಟುಂಬದಲ್ಲಿಯೇ ಇರುತ್ತೇವೆ. ನಾವೆಲ್ಲರೂ ದುಡಿದು ನನ್ನ ತಂದೆ ಕೈಗೆ ಸಂಪಾದನೆಯನ್ನು ಕೊಡುತ್ತಿದ್ದೇವು. ನಾವು ಒಟ್ಟಿಗೆ ಇರುತ್ತೇವೆ ಎಂದು ತೋರಿಸಲು ಪಡಿತರ ಚೀಟಿ ಹಾಗು ಮತದಾರರ ಚೀಟಿಯನ್ನು ಹಾಜರು ಪಡಿಸಿರುವುದಿಲ್ಲ.

**5.** ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ವಕೀಲರಿಂದ ನೋಟಿಸನ್ನು ಕಳುಹಿಸಿದ್ದೆನು ಎಂದರೆ ಸರಿ. ಸದರಿ ನೋಟಿಸಿಗೆ ಮುನಿಯಪ್ಪನ ಮಕ್ಕಳು ಅಂದರೆ 3 ರಿಂದ 6 ನೇ ಪ್ರತಿವಾದಿಗಳು ಪ್ರತ್ಯುತ್ತರ ಕಳುಹಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯೂ ಪ್ರತ್ಯುತ್ತರದಲ್ಲಿ ಹೇಳಿರುವಂತೆ ನನಗೆ ಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

**6.** ನನ್ನ ತಂದೆ ಕಾಲದಿಂದಲೂ ನಾನು ಹಾಗೂ ನನ್ನ ಸಹೋದರರು ಪ್ರತ್ಯೇಕ ಮನೆಗಳಲ್ಲಿ ವಾಸ ಇದ್ದು, ಆದರೆ ಜಮೀನುಗಳಲ್ಲಿ ಜಂಟಿ ವ್ಯವಸಾಯ ಮಾಡಿಕೊಂಡು ಆದಾಯವನ್ನು ನನ್ನ ತಂದೆ ಹಾಗೂ ಹಿರಿಯ ಮಗನಾದ ಮುನಿಯಪ್ಪನಿಗೆ ಕೊಡುತ್ತಿದ್ದೇವು ಎಂದು ನುಡಿಯುತ್ತಾರೆ. ಈ ದಾವೆಯನ್ನು ಒಟ್ಟು 40–50 ಆಸ್ತಿಗಳಿಗೆ ಸಂಬಂದಿಸಿದಂತೆ ದಾಖಲಿಸಿರುತ್ತೇವೆ. ನಮಗೆ ಪಿತ್ರಾರ್ಜಿತವಾಗಿ ಒಟ್ಟು 7 ಎಕರೆ ಜಮೀನು ಬಂದಿರುತ್ತದೆ. ಸದರಿ ಪಿತಾರ್ಜಿತ ಜಮೀನುಗಳಲ್ಲಿ ವ್ಯವಸಾಯ ಮಾಡಿ ಆದಾಯವನ್ನು ತಂದೆ ಕೈಗೆ ಕೊಡುತ್ತಿದ್ದೆವು. ಸದರಿ ಆದಾಯದಿಂದ ಸುಮಾರು 20 ಎಕರೆ ಜಮೀನನ್ನು ಸ್ವಯಾರ್ಜಿತವಾಗಿ ಸಂಪಾದಿಸಲಾಗಿದೆ. ಹಾಗಾದರೆ ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಹಾಗೂ ಖರೀದಿಸಿರುವ ಜಮೀನುಗಳಲ್ಲಿ ಒಟ್ಟು ಕೂಡಿಸಿದಾಗ 27 ಎಕರೆ ಜಮೀನು ಇರಬೇಕಲವಾ ಎಂಬ ಪ್ರಶ್ನೆಗೆ ಸಾಕ್ಷಿಯೂ ಅವುಗಳಲ್ಲಿ ಸುಮಾರು 10 ಎಕರೆಯಷ್ಟು ಮಾರಾಟ ಆಗಿರಬಹುದು ಎಂದು ನುಡಿಯುತ್ತಾರೆ.

**7.** ನನ್ನ ತಂದೆ 2010 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ಈ ಬಗ್ಗೆ ನಾನು ಮರಣ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುವುದಿಲ್ಲ, ಆದರೆ ಸಮಾಧಿಯಲ್ಲಿ ದಿನಾಂಕವನ್ನು ನಮೂದಿಸಲಾಗಿದೆ ಎಂದು ನುಡಿಯುತ್ತಾರೆ.

**8.** ನನ್ನ ತಂದೆ ಜೀವಿತ ಅವಧಿಯಲ್ಲಿ ಅವರ 4 ಜನ ಮಕ್ಕಳಾದ ನಾವುಗಳು "ಎ, ಬಿ, ಸಿ ಮತ್ತು ಡಿ" ಶೆಡ್ಯೂಲ್ ನಂತೆ 10.12.1980 ನೇ ಇಸವಿಯಲ್ಲಿ ಪಾಲುಪಾರಿಕತ್ತು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆಗೆ 1 ಎಕರೆ ಜಮೀನನ್ನು ಜೀವನಾಂಶಕ್ಕಾಗಿ ಬಿಟ್ಟಿದ್ದೆವು ಎಂದರೆ ಸರಿಯಲ್ಲ.

**9.** ಸದರಿ ವಿಭಾಗದಂತೆ ನನ್ನ ಅಣ್ಣ ಮುನಿಯಪ್ಪನಿಗೆ "ಎ" ಶೆಡ್ಯೂಲ್ ಆಸ್ತಿಯನ್ನು, ನನಗೆ "ಬಿ" ಶೆಡ್ಯೂಲ್ ಆಸ್ತಿಯನ್ನು, ಕೃಷ್ಣಪ್ಪನಿಗೆ "ಸಿ" ಶೆಡ್ಯೂಲ್ ಆಸ್ತಿಯನ್ನು ಹಾಗೂ ವೆಂಕಟರವಣಪ್ಪನಿಗೆ "ಡಿ" ಶೆಡ್ಯೂಲ್ ಆಸ್ತಿಯನ್ನು ವಿಭಾಗಿಸಿಕೊಡಲಾಗಿತ್ತು ಎಂದರೆ ಸರಿಯಲ್ಲ.

**10.** ಕೃಷ್ಣಪ್ಪನ ಭಾಗದ "ಸಿ" ಶೆಡ್ಯೂಲ್ ಆಸ್ತಿಯನ್ನು ಆತ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದ ಎಂದರೆ ಸಾಕ್ಷಿಯೂ ಖಾತೆ ಮಾಡಿಸಿಕೊಂಡಿರುವುದೇ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**11.** ನನ್ನ ಹಾಗೂ ನನ್ನ ಇಬ್ಬರ ಸಹೋದರರು ಭಾಗಕ್ಕೆ ಬಂದಂತಹ "ಎ, ಬಿ ಮತ್ತು ಡಿ" ಶೆಡ್ಯೂಲ್ ಸ್ವತ್ತುಗಳು ಸರಿಯಾಗಿರುದಿಲ್ಲ ಎಂದು ನಾನು ಗಲಾಟೆ ಮಾಡಿದ್ದು, ಆ ಕಾರಣದಿಂದ "ಎ, ಬಿ ಮತ್ತು ಡಿ" ಶೆಡ್ಯೂಲ್ ಸ್ವತ್ತುಗಳನ್ನು ದಿ. 24.05.2006 ರಂದು ಪುನಃ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಕೃಷ್ಣಪ್ಪನ ಭಾಗಕ್ಕೆ ಸಂಬಂದಿಸಿದಂತೆ 10 ಸಾವಿರ ರೂಪಾಯಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿ. 24.05.2006 ರ ವಿಭಾಗದಂತೆ ನನ್ನ ಸಹೋದರರಾದ ಮುನಿಯಪ್ಪ ಹಾಗೂ ವೆಂಕಟರವಣಪ್ಪ ನನ್ನನ್ನು ಕರೆದು ಖಾತೆ ಮಾಡಿಸಿಕೊಳ್ಳಲು ಕೇಳಿಕೊಂಡರು ಕೂಡ ನಾನು ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ.

**12.** ನಾನು ಹಾಗೂ ನನ್ನ ಸಹೋದರರು ನನ್ನ ತಂದೆಯ ಜೀವಿತ ಅವಧಿಯಲ್ಲಿ 1980 ನೇ ಇಸವಿಯಲ್ಲಿ ವಿಭಾಗ ಮಾಡಿಕೊಂಡಿದ್ದು, ಅದರಂತೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೇ ಎಂದರೆ ಸರಿಯಲ್ಲ. ನಾನು 2006 ನೇ ಇಸವಿಯಲ್ಲಿ ನನ್ನ ಸಹೊದರರಾದ ಮುನಿಯಪ್ಪ ಹಾಗೂ ವೆಂಕಟರವಣಪ್ಪ ರವರೊಂದಿಗೆ ಗಲಾಟೆ ಮಾಡಿದ್ದರಿಂದ ದಿ. 24.05.2006 ರಂದು ಪುನಃ ವಿಭಾಗ ಮಾಡಿಕೊಂಡಿರುತ್ತೇವೇ ಎಂದರೆ ಸರಿಯಲ್ಲ.

**13.** ನಾನು 10.12.1980 ರ ಪಾಲುಪಾರಿಕತ್ತು ಹಾಗೂ ದಿ. 24.05.2006 ರ ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತೇನೆಂದರೆ ಸಾಕ್ಷಿಯೂ ನನ್ನ ಅಣ್ಣ ಮುನಿಯಪ್ಪ ಹೇಳಿದ ಕಡೆಗೆ ಸಹಿ ಮಾಡಿದ್ದು ವಿಚಾರ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೆ ಓದಲು ಬರುತ್ತದೆ. ನನಗೆ ಈಗ ತೋರಿಸುತ್ತಿರುವ ದಿ. 10.12.1980 ರ ಪಾಲುಪಾರಿಕತ್ತಿನಲ್ಲಿ ತನ್ನ ಸಹಿ ಇರುತ್ತದೆ ಎಂದರೆ ಸಾಕ್ಷಿಯೂ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ-1 ಎಂದು ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

**14.** ನನಗೆ ಈಗ ತೋರಿಸುತ್ತಿರುವ ದಿ. 24.05.2006 ರ ಮರು ವಿಭಾಗ ಪತ್ರದಲ್ಲಿಯೂ ಕೂಡ ತನ್ನ ಸಹಿ ಇರುತ್ತದೆ ಎಂದರೆ ಸಾಕ್ಷಿಯೂ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಅದನ್ನು ನಿಡಿ-2 ಎಂದು ಸಾಕ್ಷಿಯ ಕೊನೆಯ ಪುಟದ ಸಹಿಯನ್ನು ನಿಡಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಮುಂದುವರೆದು ನನ್ನ ಅಣ್ಣ ಹೇಳಿದ ಕಡೆ ವಿಚಾರ ತಿಳಿದುಕೊಳ್ಳದೇ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಹಾಗೂ ನನ್ನ ಸಹೋದರರ ನಡುವೆ ಈಗಾಗಲೇ ನಿಡಿ-1 ಮತ್ತು 2 ರಂತೆ ವಿಭಾಗ ಆಗಿದ್ದರೂ ಕೂಡ ಎಲ್ಲಾ ಜಮೀನುಗಳನ್ನು ಸೇರಿಸಿ ಈ ದಾವೆಯನ್ನು ದಾಖಲಿಸಿದ್ದೇನೆಂದರೆ ಸಾಕ್ಷಿಯೂ ಈಗಲೂ ಒಟ್ಟು ಕುಟುಂಬದಲ್ಲಿರುತ್ತೇವೆ ಎಂದು ನುಡಿಯುತ್ತಾರೆ.

**15.** ಮಂಡಿಕಲ್ ನಲ್ಲಿರುವ ಮನೆ ಮತ್ತು ಜಮೀನುಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಏನಾದರೂ ಆಸ್ತಿಗಳು ಇರುತ್ತವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯೂ ಹೆಚ್.ಕೋಡಿಹಳ್ಳಿ ಗ್ರಾಮದಲ್ಲಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಹೆಚ್.ಕೋಡಿಹಳ್ಳಿ ಗ್ರಾಮದಲ್ಲಿ ಮನೆ ಹಾಗೂ ಜಮೀನು ಸೇರಿ ಒಟ್ಟು 12 ಆಸ್ತಿಗಳು ಇರುತ್ತವೆ. ಹೆಚ್.ಕೋಡಿಹಳ್ಳಿ ಗ್ರಾಮದಲ್ಲಿರುವ ಆಸ್ತಿಗಳನ್ನು ಮುನಿಯಪ್ಪ ಸಂಪಾದಿಸಿರುತ್ತಾನೆ. ನನ್ನ ಅಣ್ಣ ಮುನಿಯಪ್ಪ ಯಾರಿಂದ ಸದರಿ 12 ಆಸ್ತಿಗಳನ್ನು ಕ್ರಯ ಮಾಡಿಸಿಕೊಂಡಿರುತ್ತಾನೆ ಎಂದು ಹೇಳಲು ನೆನಪಿರುವುದಿಲ್ಲ. ಹೆಚ್ ಕೋಡಿಹಳ್ಳಿ ಗ್ರಾಮದಲ್ಲಿರುವ ಜಮೀನುಗಳಲ್ಲಿ ನಾನು ವ್ಯವಸಾಯ ಮಾಡಿರುತ್ತೇನೆ. ಹೆಚ್ ಕೋಡಿಹಳ್ಳಿ ಗ್ರಾಮದಲ್ಲಿ 4 ಮನೆಗಳು ಹಾಗೂ 8 ಜಮೀನುಗಳು ಇರುತ್ತವೆ.

**16.** ಸದರಿ 4 ಮನೆಗಳನ್ನು ನನ್ನ ಅಣ್ಣ ಮುನಿಯಪ್ಪ ಖರೀದಿಸಿದ್ದು, ನಾವು ಮನೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 4 ಮನೆಗಳ ಜಾಗವನ್ನು ಯಾರಿಂದ ಕ್ರಯ ಮಾಡಿಕೊಂಡಿರುತ್ತಾರೆ ಎಂದು ನೆನಪಿರುವುದಿಲ್ಲ. ಈ ದಾವೆಯನ್ನು ದಾಖಲಿಸುವಾಗ ಹೆಚ್ ಕೋಡಿಹಳ್ಳಿ ಗ್ರಾಮದ ಮನೆ ಹಾಗೂ ಜಮೀನುಗಳು ನನ್ನ ಅಣ್ಣ ಮುನಿಯಪ್ಪನ ಹೆಸರಿನಲ್ಲಿ ನಮೂದು ಇದ್ದವೂ. ಈ ಬಗ್ಗೆ ನಾನು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

**17.** ನನ್ನ ಅಣ್ಣ ಮುನಿಯಪ್ಪನಿಗೆ ಇಬ್ಬರೂ ಹೆಂಡತಿಯರು. ಮೊದಲನೇ ಹೆಂಡತಿ ಹೆಸರು ಮುನಿವೆಂಕಟಮ್ಮ. ಆಕೆಯದ್ದು ಪೆದ್ದೂರು ಗ್ರಾಮ. 2 ನೇ ಹೆಂಡತಿ ಹೆಸರು ರತ್ನಮ್ಮ ಹಾಗೂ ಆಕೆಯದ್ದು ಪೆದ್ದರೂರು ಗ್ರಾಮ. ಮೊದಲನೇ ಹೆಂಡತಿ ಮುನಿವೆಂಕಟಮ್ಮನಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1) ರಾಧಾಕೃಷ್ಣ, 2) ಆನಂದ ಹಾಗೂ 3) ರಮೇಶ್ ಎಂದರೆ ಸರಿ. ಅವರುಗಳೆ ಈ ದಾವೆಯಲ್ಲಿ 3 ರಿಂದ 5 ನೇ ಪ್ರತಿವಾದಿಗಳು ಎಂದರೆ ಸರಿ. 2 ನೇ ಹೆಂಡತಿ ರತ್ನಮ್ಮನಿಗೆ 4 ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ. ಅವರುಗಳೆಂದರೆ 1) ಚಲಪತಿ ಅಂದರೆ 6 ನೇಪ್ರತಿವಾದಿ, 2) ಚೌಡಮ್ಮ, 3) ಸುಜಾತಮ್ಮ, 4) ಪಾರ್ವತಮ್ಮ ಹಾಗೂ 5) ರಾಧಮ್ಮ.

**18.** ಮುನಿವೆಂಕಟಮ್ಮನ ತಂದೆ ತಾಯಿ ಹೆಸರು ರಾಮಪ್ಪ ಹಾಗೂ ರಾಮಕ್ಕ. ರಾಮಪ್ಪನ ತಂದೆ ಹೆಸರು ಚಿಕ್ಕವೆಂಕಟರಾಮಯ್ಯ. ಚಿಕ್ಕವೆಂಕಟರಾಮಯ್ಯ ನ ಹೆಣ್ಣು ಮಕ್ಕಳ ಹೆಸರು ನಾರಾಯಣಮ್ಮ, ಕೃಷ್ಣಮ್ಮ ಹಾಗೂ ನನ್ನ ತಾಯಿ ಗೋವಮ್ಮ. ನಾರಾಯಣಮ್ಮನನ್ನು ಹೆಚ್.ಕೋಡಿಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಹೆಚ್. ಕೋಡಿಹಳ್ಳಿ ಗ್ರಾಮದಲ್ಲಿ ನನ್ನ ಅಣ್ಣನ ಮುನಿಯಪ್ಪನ ಹೆಸರಿನಲ್ಲಿರುವ ಎಲ್ಲಾ ಆಸ್ತಿಗಳನ್ನು ನಾರಾಯಣಮ್ಮನ ತವರು ಮನೆಯವರು ಕೊಡಿಸಿರುವ ಆಸ್ತಿ ಎಂದರೆ ಸರಿಯಲ್ಲ.

**19.** ಚಿಕ್ಕವೆಂಕಟರಾಮಯ್ಯನ ಮಗಳಾದ ನಾರಾಯಣಮ್ಮನಿಗೆ ಮದುವೆಯಾಗಿ ಮಕ್ಕಳು ಇಲ್ಲದೇ ಇದ್ದ ಕಾರಣಕ್ಕೆ ನನ್ನ ಅಣ್ಣ ಮುನಿಯಪ್ಪನ ಮಕ್ಕಳಾದ 3 ಮತ್ತು 4 ನೇ ಪ್ರತಿವಾದಿಗಳಾದ ರಾಧಾಕೃಷ್ಣ ಹಾಗೂ ಆನಂದನನ್ನು ಮಂಡಿಕಲ್ ಗ್ರಾಮದಿಂದ ಕರೆದುಕೊಂಡು ಬಂದು ಹೆಚ್. ಕೋಡಿಹಳ್ಳಿ ಗ್ರಾಮದಲ್ಲಿ ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. ನಾರಾಯಣಮ್ಮನಿಗೆ ತನ್ನ ತವರು ಮನೆಯಿಂದ ಬಂದಂತಹ ಆಸ್ತಿಗಳನ್ನು ನನ್ನ ಅಣ್ಣ ಮುನಿಯಪ್ಪನ ಮೂಲಕ ರಾಧಕೃಷ್ಣ ಹಾಗೂ ಆನಂದನಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ರಾಧಕೃಷ್ಣ ಹಾಗೂ ಆನಂದ ತಮ್ಮ ತಂದೆಯ ಕಡೆಯಿಂದ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.